ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ
Karnataka State Rural Development and Panchayat Raj University, Gadag
ರೈತ ಭವನ, ಜನರಲ್ ಕಾರ್ಯಪ್ಪ ವೃತ್ತ, ಗದಗ– 582 101
E-mail: ksrdpru@gmail.com
Phone: 08372-230338, Fax: 08372-297343

No. RDPRU 13 EXM 2021

Date: 17.04.2021

**ಸುತ್ತೋಲೆ**

**ವಿಷಯ:** ದಿನಾಂಕ: 19.04.2021 ಮತ್ತು 20.04.2021 ರಂದು ಜರುಗಬೇಕಿದ್ದ ಎಲ್ಲ ಸ್ನಾತಕೋತ್ತರ ಪರೀಕ್ಷೆಗಳನ್ನು ಮುಂದೂಡಿದ್ದರ ಕುರಿತು.

**ಉಲ್ಲೇಖ:** 1) ವಿಶ್ವವಿದ್ಯಾಲಯದ ಪತ್ರ ಸಂ: RDPRU 13 EXM 2021 ದಿನಾಂಕ:09.04.2021

2) ದಿನಾಂಕ 16.04.2021 ರಂದು ಕುಲಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸ್ನಾತಕೋತ್ತರ ಕಾರ್ಯಕ್ರಮ ಸಂಯೋಜಕರ ಸಭೆಯ ನಡಾವಳಿ

3) ದಿನಾಂಕ 17.04.2021 ರಂದು ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಸ್ನಾತಕೋತ್ತರ ಕಾರ್ಯಕ್ರಮ ಸಂಯೋಜಕರ ಸಭೆಯ ನಡಾವಳಿ

4) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 17.04.2021

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳ ಅನ್ವಯ, ಈ ಮೂಲಕ ಎಲ್ಲ ಕಾರ್ಯಕ್ರಮದ ವಿದ್ಯಾರ್ಥಿಗಳಿಗೆ ಮತ್ತು ಬೋಧಕ ಸಿಬ್ಬಂದಿಗೆ ತಿಳಿಸುವುದೇನೆಂದರೆ, ಕರ್ನಾಟಕ ರಾಜ್ಯದ ಸಾರಿಗೆ ನೌಕರರು ಮುಷ್ಕರವನ್ನು ಹಮ್ಮಿಕೊಂಡಿದ್ದು, ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಹೋಗಿ ಪರೀಕ್ಷೆ ಬರೆಯಲು ತೊಂದರೆಯಾಗುವುದರಿಂದ ದಿನಾಂಕ: 19.04.2021 ಮತ್ತು 20.04.2021 ರಂದು ಜರುಗಬೇಕಿದ್ದ ಎಲ್ಲ ಸ್ನಾತಕೋತ್ತರ ಪರೀಕ್ಷೆಗಳನ್ನು ಮುಂದೂಡಲಾಗಿದೆ, ಸದರಿ ಪರೀಕ್ಷೆಗಳು ನಡೆಯುವ ದಿನಾಂಕಗಳನ್ನು ನಂತರ ತಿಳಿಸಲಾಗುವುದು. ಮುಂದುವರೆದು ದಿನಾಂಕ: 21.04.2021 ರಿಂದ ಈ ಮೊದಲಿನ ವೇಳಾಪಟ್ಟಿಯನ್ವಯ ಎಲ್ಲ ಪರೀಕ್ಷೆಗಳು ಜರುಗುತ್ತವೆ.

ಸದರಿ ಮಾಹಿತಿಯನ್ನು ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ತರಲು ತಿಳಿಸಲಾಗಿದೆ. ಮುಂದುವರೆದು ಕಾಲಕಾಲಕ್ಕೆ ವಿಶ್ವವಿದ್ಯಾಲಯದಿಂದ ಪ್ರಕಟಿಸಲಾಗುವ ಮಾಹಿತಿಯನ್ನು ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್ (www.ksrdpru.ac.in) ನಿಂದ ಪಡೆಯಲು ಸೂಚಿಸಲಾಗಿದೆ.

17/4/21
ಕುಲಸಚಿವರು

ಪ್ರತಿ:1) ಎಲ್ಲ ಕಾರ್ಯಕ್ರಮಗಳ ಬೋಧಕ ಸಿಬ್ಬಂದಿ, ಕ.ರಾ.ಗ್ರಾ.ಅ.ಪಂ.ರಾ.ವಿ. ಗದಗ

2) ಅಂತರ್ಜಾಲದಲ್ಲಿ ಮಾಹಿತಿ ಪ್ರಕಟಿಸಲು

3) ಸೂಚನಾ ಫಲಕಕ್ಕೆ

4) ಮಾನ್ಯ ಕುಲಪತಿಗಳ/ ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ರಾ.ಗ್ರಾ.ಅ.ಪಂ.ರಾ.ವಿ. ಗದಗ

5) ಕಚೇರಿ ಪ್ರತಿ